| | | | | |
|---|---|---|---|---|
| 7. ಆರೋಗ್ಯ | 3.98 | 0.50 | 36.09 | 40.57 |
| 8. ಸಿಬ್ಬಂದಿ | 3.48 | 10.34 | 4.02 | 17.84 |
| ಒಟ್ಟು | 79.36 | 728.24 | 209.04 | 1016.64 |

**ಬಹುರಾಷ್ಟ್ರೀಯ ಸಂಸ್ಥೆಗಳು ಬಂಡವಾಳ ಹೂಡಲು ಉದ್ದೇಶಿಸಿರುವ ಬಗ್ಗೆ**

203 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಸಾರ್ವಜನಿಕರ 5886 ಕೋಟಿ ರೂ. ಬಂಡವಾಳದಲ್ಲಿ ಸ್ಥಾಪನೆಗೊಂಡಿರುವ ಸರ್ಕಾರಿ ಕ್ಷೇತ್ರದ ಉದ್ಯಮಗಳ ಒಟ್ಟು 748 ಕೋಟಿ ರೂ. ಆಗಿದ್ದು, ಸುಧಾರಣೆ ಆಗುವ ಲಕ್ಷಣವನ್ನೇ ತೋರದೆ ಈ ಘಟಕಗಳನ್ನು ಮುಚ್ಚುವ ಅನಿವಾರ್ಯತೆ ಬಂದಿರುವ ವಿಷಯ ನಿಜವೆ, ಹಾಗಿದ್ದಲ್ಲಿ ಕಾರಣಗಳೇನು?

ಆ) ರಾಜ್ಯದಲ್ಲಿ ನೆಲೆಸಿರುವ 746 ಬೃಹತ್ ಹಾಗೂ ಮಧ್ಯಮ ಪ್ರಮಾಣದ ಉದ್ಯಮಗಳಲ್ಲಿ ಶೇಕಡ 50 ರಷ್ಟು ಬೆಂಗಳೂರಿನಲ್ಲಿದ್ದು, ಶೇಕಡ 27 ರಷ್ಟು ಮೈಸೂರು ಚಿತ್ರದುರ್ಗ ಬೆಳಗಾಂ ಹಾಗೂ ಧಾರವಾಡದಲ್ಲಿದೆ. ಉಳಿದ 14 ಜಿಲ್ಲೆಗಳಿಗೆ ಶೇಕಡ 23 ರಷ್ಟು ಉದ್ಯಮಗಳು ಉದ್ಯೋಗಾವಕಾಶ ಕಲ್ಪಿಸುವುದರಲ್ಲಿ ತೋರುವ ತಾರತಮ್ಯ ಏಕೆ?

ಇ) ರಾಜ್ಯದಲ್ಲೇ ಇರುವ ಸರ್ಕಾರಿ ಉದ್ದಿಮೆಗಳು ನಷ್ಟದ ಹಾದಿ ಹಿಡಿದಿರುವಾಗ ಈ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ, ಲಾಭದಾಯಕವಾಗಿ ಮಾಡುವುದರ ಬದಲು ಬಹುರಾಷ್ಟ್ರೀಯ ಸಂಸ್ಥೆಗಳಿಂದ ಸಾಲ ತರಲು ಪ್ರಯತ್ನಿಸುತ್ತಿರುವುದರ ಉದ್ದೇಶವೇನು?

ಈ) ಮುಚ್ಚಲು ಸನ್ನದ್ಧವಾಗಿರುವ ಘಟಕಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಉದ್ದೇಶವಿದೆಯೆ, ಹಾಗಿದ್ದಲ್ಲಿ ವಿವರ ನೀಡುವುದು

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಅ) ಸತತವಾಗಿ ನಷ್ಟ ಅನುಭವಿಸಿರುವ ಸಾರ್ವಜನಿಕ ಉದ್ಯಮಗಳ ಕಾರ್ಯಸಾಧ್ಯತೆಯನ್ನು ಪರಿಶೀಲಿಸಿ ನಂತರ ಈ ಬಗ್ಗೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಆ) ಸರ್ಕಾರ ಈ ಬಗ್ಗೆ ಯಾವುದೇ ತಾರತಮ್ಯ ನೀತಿಯನ್ನು ಅನುಸರಿಸುತ್ತಿಲ್ಲ. ರಾಜ್ಯದ ಕೈಗಾರಿಕೆಗಳಲ್ಲಿ ಹಿಂದುಳಿತ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ವಿಶೇಷ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಿದೆ ಮತ್ತು 1993ರ ಹೊಸ ಕೈಗಾರಿಕಾ ನೀತಿಯಂತೆ, ಈ ಉದ್ದೇಶಕ್ಕಾಗಿ ಈ ಪ್ರದೇಶಗಳನ್ನು 3 ವಲಯಗಳನ್ನಾಗಿ ಅಂದರೆ ವಲಯ-1, ವಲಯ-2, ವಲಯ-3 ಎಂದು ಪರಿಗಣಿಸಲಾಗಿದೆ.

ಇ) ಬಹು ರಾಷ್ಟ್ರೀಯ ಕಂಪನಿಗಳಿಂದ ಸಾಲ ತೆಗೆದುಕೊಳ್ಳುವ ಯೋಜನೆ ಸರ್ಕಾರದ ಮುಂದೆ ಇಲ್ಲ.

ಈ) ಸತತವಾಗಿ ನಷ್ಟ ಅನುಭವಿಸಿರುವ ಸಾರ್ವಜನಿಕ ಉದ್ಯಗಳ ಕಾರ್ಯಸಾಧ್ಯತೆಯನ್ನು ಪರಿಶೀಲಿಸಿದ ನಂತರ ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು.

**ಮೈಸೂರು ವಾಣಿವಿಲಾಸ್ ಮಾರುಕಟ್ಟೆ ದುರಸ್ತಿ**

288 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994ನೇ ನವಂಬರ್ ನಲ್ಲಿ ಮೈಸೂರಿನ ವಾಣಿವಿಲಾಸ್ ಮಾರುಕಟ್ಟೆ ಭಾಗಶಃ ಕುಸಿದು 2 ಜನರ ಸಾವಿಗೆ ಕಾರಣವಾಗಿರುವುದು ನಿಜವೇ?

*ಅ) ಹಾಗಿದ್ದಲ್ಲಿ ಕುಸಿದ ಕಟ್ಟಡ ಅವಶೇಷಗಳನ್ನು ತೆಗೆಯಲಾಗಿದೆಯೇ?*

ಶ್ರೀ ರೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಹೌದು.

ಆ) ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಅವಶೇಷಗಳನ್ನು ಇನ್ನೂ ಪೂರ್ಣವಾಗಿ ತೆಗೆಯಲಾಗಿಲ್ಲ. ಈಗ ನ್ಯಾಯಾಲಯವು ಕುಸಿದ ಕಟ್ಟಡದ ಉಳಿದ ಭಾಗವನ್ನು ಕೋರ್ಟ್ ಕಮೀಷನರ್ ಮತ್ತು ಕೋರ್ಟ್ ಅಬ್ಸರ್‌ವರ್, ರವರ ನೇತೃತ್ವದಲ್ಲಿ ಒಡೆದು ಹಾಕುವಂತೆ ಆದೇಶಿಸಿದೆ. ಅದರಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಆಧುನಿಕ ಮಾದರಿಯ ಸಂಕೀರ್ಣ ನಿರ್ಮಿಸಲು ಉದ್ದೇಶಿಸಿದೆ.

**ಮೈಸೂರು ಜಿಲ್ಲೆಯಲ್ಲಿರುವ ರೋಗ ಗ್ರಸ್ಥ ಕಾರ್ಖಾನೆಗಳು**

331 - ಶ್ರೀ ಎಂ. ರಾಮದಾಸ್ (ಕೃಷ್ಣರಾಜ) : ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮೈಸೂರು ಜಿಲ್ಲೆಯಲ್ಲಿ ರೋಗಗ್ರಸ್ತವಾಗಿ ಮುಚ್ಚಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು? ಹಾಗೂ ಯಾವ ಯಾವ ಕಾರ್ಖಾನೆಗಳು ಎಷ್ಟೆಷ್ಟು ವರ್ಷಗಳಿಂದ ಮುಚ್ಚಿವೆ.*

*ಆ) ರೋಗಗ್ರಸ್ತವಾಗಿ ಮುಚ್ಚಿರುವ ಕಾರ್ಖಾನೆಗಳನ್ನು ಪುನರ್ ಪ್ರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು 19 ಮಧ್ಯಮ ಮತ್ತು ಭಾರಿ ಪ್ರಮಾಣದ ಕೈಗಾರಿಕೆಗಳು ರೋಗಗ್ರಸ್ತವಾಗಿ ಮುಚ್ಚಲ್ಪಟ್ಟಿವೆ. ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಸರ್ಕಾರಿ ಆದೇಶದ ಸಂಖ್ಯೆ: ಸಿಐ15 ಪಿಯುಎಂ 86, ಬೆಂಗಳೂರು ದಿ.17-10-88ರ ಪ್ರಕಾರ ರೋಗಗ್ರಸ್ತ ಘಟಕಗಳ ಪುನಃಶ್ಚೇತನಕ್ಕೆ ಈ ಕೆಳಕಂಡ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

1. ಅಭಿವೃದ್ಧಿ ಸಾಲಗಳ ಮರುಪಾವತಿಯನ್ನು ಮೂರು ವರ್ಷಗಳ ಅವಧಿಗೆ ಮುಂದೂಡುವುದು ಹಾಗೂ ಬಾಕಿಯಿರತಕ್ಕ ಕಂತುಗಳ ಸಾಲವನ್ನು ಸರಳ ಬಡ್ಡಿಗಳೊಂದಿಗೆ (ಶೇ.18) ಮರುಪಾವತಿ ಪಡೆಯಬಹುದು.
2. ವಿದ್ಯುತ್ ಕಡಿತವನ್ನು ರೋಗಗ್ರಸ್ತ ಘಟಕಗಳ ಪುನಃ ಶ್ಚೇತನಗೊಳಿಸುವಲ್ಲಿ ಸಾಮಾನ್ಯ ಘಟಕಗಳಿಗೆ ವಿಧಿಸುವ ಶೇ. 50 ಭಾಗ ಕಡಿಮೆಗೊಳಿಸುವುದು.
3. ಘಟಕಗಳು ಪುನಃ ಶ್ಚೇತನ ವರದಿಯಲ್ಲಿ ತಿಳಿಸಿರುವಂತೆ ನಗರ ಭೂಮಿಯನ್ನು ಮಾರಾಟ ಮಾಡಲು ಘಟಕದ ಪುನಃಶ್ಚೇತನ ಯೋಜನೆಯಲ್ಲಿ ಅಳವಡಿಸಲು ಸರ್ಕಾರದ ಪರವಾಗಿ ನೀಡುವುದು.
4. ರೋಗಗ್ರಸ್ತ ಘಟಕದಿಂದ ಸರ್ಕಾರಕ್ಕೆ ಬರಬೇಕಾದ ಮೊತ್ತಕ್ಕೆ ಬ್ಯಾಂಕುಗಳಿಂದ ಯಾವುದೇ ರೀತಿಯ ಗ್ಯಾರಂಟಿಯನ್ನು ನಿಂಬಧಿಸದಿರುವುದು.
5. ಕಾರ್ಮಿಕ ಇಲಾಖೆಯ ಮೂಲಕ ಕಾರ್ಮಿಕ ಸಂಘಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ನೆರವಾಗುವುದು.

ಬಿ.ಐ.ಎಫ್.ಆರ್. ನಲ್ಲಿ ರೋಗಗ್ರಸ್ತವೆಂದು ನೊಂದಾಯಿಸಲ್ಪಟ್ಟ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಉಚ್ಚ ಮಟ್ಟದ ಸಮಿತಿಯ ಮುಖಾಂತರ (ಹೈ ಲೆವೆಲ್ ಕಮಿಟಿ) ಪುನಃ ಶ್ಚೇತನಕಾರ್ಯಕ್ರಮವನ್ನು ಸರ್ಕಾರವು ಕೈಗೊಳ್ಳುತ್ತದೆ.